
ಅಂದು ಬೆಳಗಿನ ತಿಂಡಿಗೆ ಉತ್ತರ ಕೆರೊಲಿನಾ ರಾಜ್ಯದ ರ್‍ಯಾಲಿ ಎಂಬ ನಗರದ ಆಸ್ಪತ್ರೆಯಲ್ಲಿ ನಡೆಯುವ ಕಾನ್ಫರೆನ್ಸು ಶುರುವಾಗುವ ಮುನ್ನ ಸಾಲಿನಲ್ಲಿ ನಿಂತು ಕ್ರಸಾಂಟು, ಅದಕ್ಕುಜ್ಜುವ ಹಳದಿಬೆಣ್ಣೆ, ಸ್ಟ್ರಾಬೆರಿ ಜೆಲ್ಲಿ, ಒಂದು ಮಫಿನ್, ಇನ್ನೊಂದರ್ಧ ಡೋನಟ್ಟು ಎಲ್ಲವನ್ನೂ ಒಂದು ತಟ್ಟೆಗೆ ಹಾಕಿಕೊಂಡು ಇನ್ನೊಂದು ಕೈಯಲ್ಲಿ ಕಾಫಿ ಲೋಟವನ್ನು ಹಿಡಕೊಂಡು ಎಲ್ಲವನ್ನೂ ಒಂದೇ ಗುರುತ್ವಕೇಂದ್ರದಲ್ಲಿರಿಸಿಕೊಳ್ಳಲು ಒದ್ದಾಡುತ್ತಿದ್ದಾಗ ಹಿಂದಿನಿಂದ ನನ್ನ ಬೆನ್ನ ಮೇಲೆ ಒಂದು ಜೋರಾಗಿ ಏಟು ಬಿತ್ತು. ಬಿದ್ದ ಏಟಿಗೆ ಕೈಲಿದ್ದ ಕಾಫಿ ತುಳುಕಿದ್ದಷ್ಟೇ ಅಲ್ಲ, ನಾನೂ ಅಡ್ಡಡ್ಡ, ಉದ್ದುದ್ದ ಅಳ್ಳಾಡಿದೆ. ಹಿಂದೆ ದಟ್ಟ ಮೇಕಪ್ ಹಾಕಿದ್ದ ಆರಡಿಯ ವ್ಯಕ್ತಿ. 'ಸೂರಿ, ನೀನಿಲ್ಲಿ?' ಎಂಬ ಆ ಮುಖಕ್ಕೆ ಹೊಂದದ ಧ್ವನಿ ಕೇಳಿತು. ಗುರುತು ಸಿಗುವುದಕ್ಕೆ ಹದಿನೈದು ಸೆಕಂಡುಗಳು ಹಿಡಿದವು. ಮಾರಿಸ್ ವಿಲಿಯಮ್. ಸಾಲಿನಲ್ಲಿ ನನ್ನ ಹಿಂದೆ ಇನ್ನೂ ಬಹಳ ಜನ ಇದ್ದುದರಿಂದ ನನ್ನ ತಬ್ಬಿಬ್ಬಿಗೂ ಅಲ್ಲಿ ಸಮಯವಿರಲಿಲ್ಲ. ನಾನು ಹಾಗೆಯೇ ಮುಂದೆ ಮುಂದೆ ನಡೆಯುತ್ತಾ ಒಂದು ಟೇಬಲ್ ಹಿಡಿದೆ.

'ಸೂರಿ' ಎಂದು ತನ್ನ ಕಲ್ಲಂಗಡಿ, ಚಕ್ಕೋತ, ಪಪಾಯಿ, ಸ್ಟ್ರಾಬೆರಿ ಹಣ್ಣುಗಳ ಹೋಳುಗಳು, ಲೋಫ್ಯಾಟ್ ಯೋಗರ್ಟ್, ಗ್ರೀನ್ ಟೀ ಎಲ್ಲವನ್ನೂ ತಂದು ನನ್ನ ಮುಂದೆ ಕೂತಾಗ ಆತನ ಮೇಕಪ್ಪಿನ ಜತೆ ಉಪಾಹಾರದ ತಟ್ಟೆಯೂ ನನ್ನನ್ನು ಅಣಕಿಸಿತು. ನಾನು ಮಾತಾಡಲು ಅವಕಾಶವಿಲ್ಲದ ಹಾಗೆ ಕ್ರಸಾಂಟನ್ನು ತಿನ್ನಲು ತೊಡಗಿದೆ. ಕಾಫಿ ಕುಡಿಯುತ್ತಿದ್ದೆ.

'ಸೂರಿ, ನೀನೂ ಬಂದಿದ್ದೀಯ ಅಂತ ಈಗ ಗೊತ್ತಾಯಿತು. ನಮ್ಮೂರಿಂದ ಇನ್ಯಾರು ಬಂದಿದ್ದಾರೆ ಅಂತ ಗೆಸ್ಟ್ ಲಿಸ್ಟಲ್ಲಿ ನೋಡಿದಾಗ ನಿನ್ನ ಹೆಸರು ಕಾಣಿಸಿತು. ಅಲೋನ್ನೋ, ಅಲಾಂಗೋ' ಎಂದ.



ಎಸ್.ವಿ. ಹೂಗಾರ

'ಅಲೋನಪ್ಪ. ಹೆಂಡತಿಗೆ ರಜಾ ಇಲ್ಲ' ಎಂದೆ. 'ನಾನು ಲಕ್ಕಿ, ಲೀಸಾಗೆ ರಜೆ ಸಿಕ್ಕಿತು. ಮೂರು ದಿನ ಮುಂಚೆ ಬಂದೆವು. ಸ್ಮೋಕಿ ಪರ್ವತಗಳಿಗೆ ಡ್ರೈವ್ ಮಾಡಿಕೊಂಡು ಹೋಗಿದ್ದೆವು. ಎಂಥ ಲ್ಯಾಂಡ್‌ಸ್ಕೇಪಂತೀಯ.